1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ತೀರ್ಥಹಳ್ಳಿ

ಸಿ.ಸಿ. ನಂಃ 1/2018

| | | |
|---|---|---|
| ಸಾಕ್ಷಿದಾರರ ಹೆಸರು | ಶಶಿಧರ ಎನ್. | |
| ತಂದೆಯ ಹೆಸರು | ಜಿ.ಎಸ್. ನಾರಾಯಣ ನಾಯ್ಕ | ಪಿಡಬ್ಲ್ಯೂ-3 |
| ವಯಸ್ಸು | 44 ವರ್ಷ | ಸಿಡಬ್ಲ್ಯೂ-3 |
| ಉದ್ಯೋಗ | ಉಪವಲಯ ಅರಣ್ಯಾಧಿಕಾರಿ | |
| ವಾಸಸ್ಥಳ | ಕೋಣಂದೂರು | |

ದಿಃ 14-02-2020 ರಂದು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಅವರಿಂದಃ-

ನಾನು 2013 ರಿಂದ 2017 ರ ವರೆಗೆ ಮಂಡಗದ್ದೆ ವಲಯದದಲ್ಲಿ ಉಪವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 04-04-2016 ರಂದು ರಾತ್ರಿ ಸಮಯದಲ್ಲಿ ನಾನು, ಚಾಸಾ-1, 2, 4, 5 ರವರು ಕಿಕ್ಕೇರಿ ಮಾರ್ಗವಾಗಿ ಗಸ್ತು ಮಾಡುತ್ತಿರುವಾಗ ಬೆಳಗಿನ ಜಾವ 05 ಕ್ಕೆ ಚಾಸಾ-7 ರವರು ಚಾಸಾ1 ರವರಿಗೆ ದೂರವಾಣಿ ಕರೆ ಮಾಡಿ ಕಿಕ್ಕೇರಿ ಗ್ರಾಮದ ಕಪ್ಪೆಹೊಂಡ ಅರಣ್ಯ ಪ್ರದೇಶದಲ್ಲಿ ಮರ ಕಡಿತಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾವು ಸದರಿ ಸ್ಥಳಕ್ಕೆ ಭೇಟಿ ನೀಡಿ ಪರಿಶಿಲಿಸಿದಾಗ ಸದರಿ ಸ್ಥಳದಲ್ಲಿ ಒಂದು ವಾಹನ ಹೋಗಿರುವ ನಿಶಾನೆ ಕಂಡುಬಂದಿರುತ್ತದೆ. ನಂತರ ಸದರಿ ವಾಹನ ಹೋದ ನಿಶಾನೆಯನ್ನು ಅನುಸರಿಸಿ ಹೋಗುವಾಗ ಸದರಿ ದಾರಿಯಲ್ಲಿ ಚಿಕ್ಕ ಚಿಕ್ಕ ಗಿಡಗಳನ್ನು ಕಡಿದ ನಿಶಾನೆ ಕಂಡುಬಂದಿರುತ್ತದೆ. ಸದರಿ ಸಮಯದಲ್ಲಿ ಕೆಲವು ಆಸಾಮಿಗಳು ವಾಹನಕ್ಕೆ ಮರದ ತುಂಡುಗಳನ್ನು ತುಂಬುತ್ತಿರುವ ಶಬ್ದ ಬಂದಿರುತ್ತದೆ. ಆಗ ನಾವು ನಮ್ಮ ಕೈಯಲ್ಲಿದ್ದ ಬ್ಯಾಟರಿಯ ಸಹಾಯದಿಂದ ನೋಡಲಾಗಿ ಸದರಿ 06 ಜನ ಆಸಾಮಿಗಳು ಕಾಡಿನಲ್ಲಿ ಓಡಿ ಹೋಗಿರುತ್ತಾರೆ. ಸದರಿ ಸ್ಥಳದಿಂದ ಓಡಿ ಹೋದ 06 ಜನ ಆಸಾಮಿಗಳು ಯಾರು ಎಂದು ನಮಗೆ ತಿಳಿದಿರುವುದಿಲ್ಲ. ನಂತರ ನಾವು ಅವರನ್ನು ಹಿಡಿಯಲು ಪ್ರಯತ್ನಿಸಿದೆವು. ಆದರೆ ಸದರಿಯವರು ಕಾಣೆಯಾಗಿರುತ್ತಾರೆ. ನಂತರ ಸ್ಥಳದಲ್ಲಿ ನಿಂತಿದ್ದ ವಾಹನ ಬಳಿ ಬಂದು ಪರಿಶೀಲಿಸಿ ನೋಡಿದಾಗ ಸದರಿ ಸ್ವರಾಜ್ ಮಾಜ್ದ ವಾಹನದಲ್ಲಿ 05 ತುಂಡುಗಳು ಇದ್ದುದ್ದು ಕಂಡುಬಂದಿರುತ್ತದೆ. ನಂತರ ಸದರಿ ತುಂಡುಗಳ ವಾಸನೆ ಮತ್ತು ಗುಣಧರ್ಮದ ಆಧಾರದ ಮೇಲೆ ಅವುಗಳು ಬೀಟೆ ತುಂಡುಗಳು ಎಂದು ತಿಳಿದುಬಂದಿರುತ್ತದೆ. ಸದರಿ ಸ್ಥಳದಲ್ಲಿ ನೆಲದ ಮೇಲೆ 19 ಬೀಟೆ ತುಂಡುಗಳು ಬಿದ್ದಿದ್ದವು. ನಂತರ ಸದರಿ ತುಂಡುಗಳನ್ನು ಪರಿಶೀಲಿಸಿ ನೋಡಿದಾಗ ಸದರಿ ತುಂಡುಗಳ ಮೇಲೆ ಯಾವುದೇ ಇಲಾಖಾ ಚಾಪ ಕಂಡುಬಂದಿರುವುದಿಲ್ಲ. ಆದ್ದರಿಂದ ಅವುಗಳನ್ನು ಅಕ್ರಮವಾಗಿ ಕಡಿತಲೆ ಮಾಡಿದ್ದರು ಎಂದು ತಿಳಿದುಬಂದಿರುತ್ತದೆ. ಸದರಿ ಸ್ವರಾಜ್ ಮಾಜ್ದ ವಾಹನದಿಂದ 02 ಮೀಟರ್ ದೂರದಲ್ಲಿ ಒಂದು ಬುಡ ಹಾಗೂ 20 ಮೀಟರ್ ದೂರದಲ್ಲಿ ಮತ್ತೊಂದು ಬುಡ ಕಂಡುಬಂದಿರುತ್ತದೆ. ಸದರಿ ಸ್ವರಾಜ್ ಮಾಜ್ದ ವಾಹನವನ್ನು ಪರಿಶೀಲಿಸಿ ನೋಡಿದಾಗ ಸದರಿ ವಾಹನದಲ್ಲಿ ಆರ್.ಸಿ ನಕಲು ಪ್ರತಿ ದೊರೆತಿರುತ್ತದೆ. ನಂತರ ಅದನ್ನು ಪರಿಶೀಲಿಸಿ ನೋಡಲಾಗಿ ಸದರಿ ವಾಹನ ಹಸೈನಾರ್ ಬಿನ್ ಮೊಸಾಬಾ ಬ್ಯಾರಿ ಎನ್ನುವವರಿಗೆ ಸಂಬಂಧಿಸಿದ್ದಾಗಿರುತ್ತದೆ. ನಂತರ ಸದರಿ ವ್ಯಕ್ತಿಯ ವಿರುದ್ಧ ಮತ್ತು ಇನ್ನಿತರೆ 05 ಜನರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇವೆ. ನಂತರ ಸದರಿ 24 ತುಂಡುಗಳ ಮೇಲೆ ಇಲಾಖಾ ಚಾಪಾವಾದ ಕೆ.ಎನ್.ಎಫ್.ಡಿ.ಜಿ.118.ಎಫ್.ಎಫ್. ಎಂದು ಮುದ್ರಿಸಲಾಗಿರುತ್ತದೆ. ನಂತರ ಸದರಿ ತುಂಡುಗಳಿಗೆ 01 ರಿಂದ 24 ಎಂದು ಕ್ರಮ ಸಂಖ್ಯೆ ನೀಡಿರುತ್ತೇವೆ. ನಂತರ ವಾಹನಕ್ಕೆ ಕ್ರಮ ಸಂಖ್ಯೆ 25 ಎಂದು ನೀಡಿರುತ್ತೇವೆ. ವಾಹನ ದಾಖಲಾತಿಗೆ ಕ್ರಮ ಸಂಖ್ಯೆ 26 ಎಂದು ನೀಡಿರುತ್ತೇವೆ. ನಂತರ ಬೆಳಗ್ಗೆ 06.30 ರಿಂದ 08.00 ರ ವರೆಗೆ ಇಲಾಖಾ

ಸಿಬ್ಬಂದಿಗಳ ಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಿ ಸದರಿ ತುಂಡುಗಳನ್ನು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಸಮಯದಲ್ಲಿ ಸ್ಥಳೀಯರು ಯಾರೂ ದೊರೆತಿರದ ಕಾರಣ ನಮ್ಮ ಇಲಾಖಾ ಸಿಬ್ಬಂದಿಗಳೇ ಪಂಚರಾಗಿ ಸಹಿ ಮಾಡಿರುತ್ತಾರೆ. ನಂತರ ಅಮಾನತ್ತುಪಡಿಸಿಕೊಂಡ ತುಂಡುಗಳನ್ನು ಸದರಿ ವಾಹನದಲ್ಲಿ ನಮ್ಮ ಕಛೇರಿ ಆವರಣಕ್ಕೆ ತೆಗೆದುಕೊಂಡು ಹೋಗಿರುತ್ತೇವೆ.

3. ಸಾಕ್ಷಿದಾರರು ನಿಪಿ-1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿಪಿ-5 ರಿಂದ 10 ರ ಭಾವಚಿತ್ರಗಳನ್ನು ನೋಡಿ ಗುರುತಿಸುತ್ತಾರೆ. ನಾನು ಆರೋಪಿಯನ್ನು ನೋಡಿರುವುದಿಲ್ಲ.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಟಿ.ಎಲ್.ಎಂ. ವಕೀಲರಿಂದ.</u>

ನಾನು ಕನ್ನಂಗಿಯ ಅರಣ್ಯ ಇಲಾಖೆಯ ವಸತಿ ಗೃಹದಲ್ಲಿ ವಾಸವಾಗಿರುತ್ತೇನೆ. ಚಾಸಾ-1 ರವರು ನನ್ನನ್ನು ಮತ್ತು ಚಾಸಾ-2 ರವರನ್ನು ಅರಣ್ಯ ಕಛೇರಿಗೆ ರಾತ್ರಿ 08 ಗಂಟೆಗೆ ಕರೆಸಿರುತ್ತಾರೆ. ನಾವು ನನ್ನ ಖಾಸಗಿ ಬೈಕ್ ನಲ್ಲಿ ಹೋಗಿರುತ್ತೇವೆ. ನಂತರ ನಾವುಗಳು ಗಸ್ತಿಗೆ ಹೋಗಿರುತ್ತೇವೆ. ನಾನು ಕಛೇರಿಗೆ ಹೋದಾಗ ಚಾಸಾ-1, 4, 5 ರವರು ಕಛೇರಿಯಲ್ಲಿ ಇದ್ದರು. ಸದರಿ ದಿನ ನಮ್ಮ ಜೀಪಿನ ಚಾಲಕರು ಯಾರಾಗಿದ್ದರು ಎಂದು ನನಗೆ ನೆನಪಿಲ್ಲ. ಸದರಿ ಚಾಲಕನಿಗೆ ಘಟನೆಯ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಜೀಪಿನ ಚಾಲಕನನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಮತ್ತು ಮಹಜರಿಗೆ ಸಹಿ ಮಾಡಿರುವುದಿಲ್ಲ. ನಾವು ಕಛೇರಿಯಿಂದ ಹೊರಟಾಗ ನಮ್ಮೊಂದಿಗೆ ಪ್ರ.ವ.ವ ಪ್ರತಿ, ಹಾಳೆಗಳು, ಬ್ಯಾಟರಿ ಗಳನ್ನು ತೆಗೆದುಕೊಂಡು ಹೋಗಿರುತ್ತೇವೆ. ನಾವು ಗಸ್ತು ಮಾಡುತ್ತಿರುವಾಗ ಈ ಪ್ರಕರಣದ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇರಲಿಲ್ಲ. ನಾನು ಹೇಳಿದ ಘಟನಾ ಸ್ಥಳಕ್ಕೆ ಬೆಳಗಿನ ಜಾವ 05 ಗಂಟೆಗೆ ಹೋಗಿರುತ್ತೇವೆ. ನಾವು ಸದರಿ ಸ್ಥಳಕ್ಕೆ ಹೋದಾಗ ವಾಹನಕ್ಕೆ ತುಂಬುವ ಶಬ್ದ ಕೇಳಿಸಿರುತ್ತದೆ. ಸದರಿ ಸಂದರ್ಭದಲ್ಲಿ ಯಾವ ವ್ಯಕ್ತಿಗಳು ತುಂಡುಗಳನ್ನು ತುಂಬುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅವರ ಹೆಸರು ಮತ್ತು ವಿಳಾಸಗಳು ನನಗೆ ಗೊತ್ತಿರುವುದಿಲ್ಲ. ಚಾಸಾ-1 ರವರು ಸದರಿ ಲಾರಿಯಲ್ಲಿದ್ದ ಆರ್.ಸಿ ದಾಖಲಾತಿಯನ್ನು ಪರಿಶೀಲಿಸಿರುತ್ತಾರೆ. ಸದರಿ ಸಮಯ ಬೆಳಗಿನ ಜಾವವಾಗಿದ್ದರಿಂದ ಖಾಸಗಿ ಪಂಚರನ್ನು ಕರೆಸಲು ಪ್ರಯತ್ನಿಸಿರುವುದಿಲ್ಲ. ಚಾಸಾ-1 ರವರು ದೂರವಾಣಿ ಮೂಲಕ ಎಫ್.ಓ.ಸಿ ಸಂಖ್ಯೆಯನ್ನು ಪಡೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಬರೆಯುವ ಪೂರ್ವದಲ್ಲಿಯೇ ಎಫ್.ಓ.ಸಿ ಸಂಖ್ಯೆಯನ್ನು ಪಡೆದುಕೊಂಡಿರುತ್ತಾರೆ. ಪ್ರತಿ ತುಂಡಿನ ಅಳತೆಯನ್ನು ನನಗೆ ಹೇಳಲು ಆಗುವುದಿಲ್ಲ. ನಿಪಿ-1 ರಲ್ಲಿ ಎಫ್.ಓ.ಸಿ ಸಂಖ್ಯೆಯನ್ನು ನಮೂದಿಸಿರುವುದಿಲ್ಲ. ಕೆ.ಎನ್.ಎಫ್.ಡಿ.ಜಿ.118.ಎಫ್.ಎಫ್. ಚಾಪವು ನನಗೆ ಸಂಬಂಧಿಸಿದ್ದಾಗಿರುತ್ತದೆ. ನಾನು ಸದರಿ ಲಾರಿಯನ್ನು ಚಾಲನೆ ಮಾಡಿಕೊಂಡು ಕಛೇರಿಗೆ ಬಂದಿರುತ್ತೇನೆ. ಸದರಿ ಸಂದರ್ಭದಲ್ಲಿ ಸಿಬ್ಬಂದಿಯವರು ಇಲಾಖಾ ಜೀಪಿನಲ್ಲಿ ಮುಂದೆ ಹೋಗಿರುತ್ತಾರೆ. ನಂತರ ಲಾರಿಯಲ್ಲಿದ್ದ 05 ತುಂಡುಗಳನ್ನು ಕಛೇರಿಯ ಆವರಣಕ್ಕೆ ತಂದು ಹಾಕಿರುತ್ತೇವೆ. ನಂತರ ಮತ್ತೊಂದು ಖಾಸಗಿ ವಾಹನದಲ್ಲಿ ಸ್ಥಳದಲ್ಲಿದ್ದ 19 ತುಂಡುಗಳನ್ನು ತುಂಬಿಸಿಕೊಂಡು ಕಛೇರಿಗೆ ತಂದಿರುತ್ತೇವೆ. ಸದರಿ ವಿಚಾರದ ಬಗ್ಗೆ ಪ್ರತ್ಯೇಕ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ನಿಪಿ-1 ನ್ನು ಬರೆಯುವ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ. ನಾನು ಹೇಳಿದ ಸ್ಥಳದಲ್ಲಿ ನಾಟಾ ತುಂಡುಗಳನ್ನು ಹೊರತುಪಡಿಸಿ ಬೇರೆ ತುಂಡುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಿಪಿ-5, 6 ರ ಭಾವಚಿತ್ರಗಳನ್ನು ಯಾರು ಯಾವಾಗ ತೆಗೆದರು ಎಂದು ನನಗೆ ಗೊತ್ತಿಲ್ಲ. ನಿಪಿ-10 ರ ಭಾವಚಿತ್ರವನ್ನು ಕಛೇರಿ ಆವರಣದಲ್ಲಿ ತೆಗೆದಿರುತ್ತೇವೆ. ನಿಪಿ-10 ರ ಭಾವಚಿತ್ರವನ್ನು ತೆಗೆಯುವ ವಿಚಾರವಾಗಿ ಪಂಚನಾಮೆಯನ್ನು ಜರುಗಿಸಿರುವುದಿಲ್ಲ.

3. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ ಸಂಖ್ಯೆಗೊಸ್ಕರ ಆರೋಪಿತನ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಮೇಲಾಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇದೆ**

1 ನೇ **ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ತೀರ್ಥಹಳ್ಳಿ.**